ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ರಾಜ್ಯದಲ್ಲಿ ನೆರೆಹಾವಳಿಯಿಂದುಂಟಾದ ಹಾನಿಯ ಪ್ರಮಾಣ

ಶ್ರೀ ಆರ್.ವಿ. ದೇಶಪಾಂಡೆ:- ಇಷ್ಟೊಂದು ಅನ್‌ಪ್ರಿಸಿಡೆಂಟೆಡ್ ನೆರೆಹಾವಳಿ ಆಗಿದ್ದರೂ ಕೂಡ ಯಾವುದೇ ನೆರವು ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಸಿಕ್ಕಿಲ್ಲ ಎಂದು ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳುತ್ತಿದ್ದಾರೆ. ಈ ವಿಚಾರವಾಗಿ ನಾವೂ ಪ್ರಸ್ತಾಪ ಮಾಡಿದ್ದೇವೆ. ಬರೀ 7-8 ಲಕ್ಷ ರೂಪಾಯಿಗಳು ಪ್ರಧಾನಮಂತ್ರಿಗಳ ರಿಲೀಫ್ ಫಂಡ್‌ನಿಂದ ಬಂದಿದ್ದು ಬಿಟ್ಟರೆ ಸ್ಪೆಷಲ್ ಅಸಿಸ್ಟನ್ಸ್ ಯಾವುದೂ ಕೂಡ ಅವರು ಕೊಟ್ಟಿಲ್ಲ. ರಾಜ್ಯ ಸರ್ಕಾರ ಕೂಡ ಈ ಒಂದು ನೆರೆಹಾವಳಿ ಕಾರ್ಯಕ್ರಮವನ್ನು ವಾರ್‌ಫುಟಿಂಗ್‌ನಲ್ಲಿ ಮಾಡಬೇಕಾಗಿತ್ತು. ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಕೆಲವು ಜಿಲ್ಲೆಗಳಲ್ಲಿ ನೆರೆಹಾವಳಿ ಆದಾಗ ಸಾಕಷ್ಟು ಮನೆಗಳು ಬಿದ್ದವು. ಸಾಕಷ್ಟು ಅನಾಹುತವಾಯಿತು. ರೈತರಿಗೆ ಕಾಂಪನ್‌ಸೇಷನ್ ಸಿಕ್ಕಿಲ್ಲ. ಈಗಲೂ ಪರಿಸ್ಥಿತಿ ಅದೇ ಇದೆ. ರೈತರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ರಿಪ್ಲೈ ಕೊಡುವಾಗ ಲ್ಯಾಂಡ್ ರೆವಿನ್ಯೂ ರೆಮಿಷನ್ ಮಾಡುವ ವಿಷಯದಲ್ಲಿ, ರೈತರಿಗೆ ಕ್ರಾಪ್ ಕಾಂಪನ್‌ಸೇಷನ್ ಕೊಡುವ ವಿಷಯದಲ್ಲಿ ಡೆಫನೆಟ್ಲಾಗಿ ಹೇಳಬೇಕಾಗಿತ್ತು. ನಾವು ನಿನ್ನೆ ಇದೇ ವಿಷಯವಾಗಿ ವಾಕೌಟ್ ಮಾಡಿದೆವು. ನಾನು ಇಲ್ಲಿ ವಾಟಾಳ್ ನಾಗರಾಜ್ ಅವರಿಗೂ ಹಾಗೂ ಬಿಜೆಪಿ ಸದಸ್ಯರಿಗೆ ವಿನಂತಿ ಮಾಡುತ್ತಿದ್ದೇನೆ. ಎಷ್ಟೇ ಭಿನ್ನಾಭಿಪ್ರಾಯ ಇದ್ದರೂ ಕೂಡ ಮಾನ್ಯ ಕಂದಾಯ ಸಚಿವರು ರೈತರ ಸಲುವಾಗಿ ಏನಾದರೂ ಮಾಡುತ್ತೇವೆಂದು ಹೇಳಿದ್ದಾರೆ. ಇದು ರೈತರ ಸಮಸ್ಯೆ ಇರುವುದರಿಂದ ಸರ್ಕಾರ ನೇರವಾಗಿ ರೈತರಿಗೆ ಯಾವ ರೀತಿ ಸಹಾಯ ಮಾಡುತ್ತದೆಂದು ಸ್ಪಷ್ಟವಾಗಿ ಹೇಳಬೇಕು. ರೆವಿನ್ಯೂ ರೆಮಿಷನ್, ಕ್ರಾಪ್ ಕಾಂಪನ್‌ಸೇಷನ್ ಬಗ್ಗೆ ನೇರವಾಗಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ. ಸದನದಲ್ಲಿ ಇನ್ನೂ ಕಾರ್ಯಕ್ರಮಗಳು ನಡೆಯಬೇಕಾಗಿದ್ದರಿಂದ ಮಾನ್ಯ ಸದಸ್ಯರು ಧರಣಿಯನ್ನು ಮುಗಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಪಿ.ಜಿ.ಆರ್ ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಜನರ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆಂದು ಹೇಳಿ ಈ ಸದನ ಇರತಕ್ಕದ್ದು. ಇದರಲ್ಲಿ ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯಗಳನ್ನು ನಿಸ್ಪಕ್ಷಪಾತವಾಗಿ, ನಿರ್ವಂಚನೆಯಿಂದ ಜನರ ಪರವಾಗಿ ಸಮಸ್ಯೆಗಳ ಬಗ್ಗೆ ನಾವು ಒಂದು ಹಂತದವರೆವಿಗೂ ಸಹಿತ ಹೋರಾಟ ಮಾಡುತ್ತೇವೆ. ಒಂದು ವಿಚಾರವನ್ನು ಬಹಳ ಖೇದದಿಂದ ಹೇಳಬೇಕಾಗುತ್ತದೆ. ರಾಜ್ಯದಲ್ಲಿ ಇತ್ತೀಚೆಗೆ ಆಗಿರತಕ್ಕ ನೆರೆಹಾವಳಿ, ಕಳೆದ 47 ವರ್ಷಗಳಲ್ಲಿ ನಡೆದಿರತಕ್ಕ ಉದಾಹರಣೆ ಇಲ್ಲ. ಇಂತಹ ಸಂದರ್ಭದಲ್ಲಿ ಪ್ರಧಾನಮಂತ್ರಿಗಳು ಕೊನೆಯ ಪಕ್ಷ ಅರ್ಧ ದಿವಸ ಬಂದು ಹೋಗಬಹುದಾಗಿತ್ತು. ಒಂದು ದಿವಸ ರಾತ್ರಿ ಬರುವುದಕ್ಕೆ ಆಗಿಲ್ಲ ಎಂದರೆ ರಾತ್ರಿ ಇದ್ದು ಮಾರನೆಯ ದಿವಸ ನೋಡಬಹುದಾಗಿತ್ತು. ಅದನ್ನು ಮಾಡಿಲ್ಲ. ನಮ್ಮ ಕೇಂದ್ರ ಸರ್ಕಾರದ 5 ಜನ ಮಂತ್ರಿಗಳು, ನಮ್ಮ ರಾಜ್ಯದಲ್ಲಿ ಜಾಫರ್ ಷರೀಫ್ ಅವರು ಸ್ವತಃ ಈ ರಾಜ್ಯಕ್ಕೆ ಬಂದು ತಮ್ಮ ಜಿಲ್ಲೆಯಾದ ಬಿತ್ರದುರ್ಗ ಒಂದನ್ನು ಬಿಟ್ಟರೆ ಅವರೂ ಕೂಡ ಪ್ರಧಾನಿಯವರ ಪರವಾಗಿ ಬಂದಿದ್ದೇನೆಂದು ಹೇಳಿಲ್ಲ. ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇದು ಜನರಿಗೆ ಗೊತ್ತಾಗಬೇಕೆನ್ನುವ ದೃಷ್ಟಿಯಿಂದ. ಜನರೂ ಇದನ್ನು ಅರ್ಥ ಮಾಡಿಕೊಳ್ಳುತ್ತಾರೆ. ಇವತ್ತು ಕೇಂದ್ರದಲ್ಲಿ ಇರತಕ್ಕ ಪ್ರಧಾನಿಗಳು ನಮ್ಮ ಸಹಾಯಕ್ಕೆ ಬಂದಿಲ್ಲ ಎಂದು ಅರ್ಥವಾಗಿದೆ. ವಾಟಾಳ್ ನಾಗರಾಜ್ ಅವರು ಮತ್ತು ಬಿಜೆಪಿ ಸದಸ್ಯರು ಧರಣಿ ಕುಳಿತಿದ್ದಾರೆ. ವಾಟಾಳ್ ನಾಗರಾಜ್ ಅವರು, ಬಿಜೆಪಿ ಪಕ್ಷದ ಸದಸ್ಯರು ಅಥವಾ ಸಹ ಸದಸ್ಯರೇನಲ್ಲ. ಅವರ ಅಭಿಪ್ರಾಯ ತಿಳಿಸುವುದಕ್ಕೆ ಕೇಂದ್ರದ ಧೋರಣೆಯನ್ನು ಖಂಡನೆ ಮಾಡಿ ಧರಣಿ ಮಾಡಲು ಬಂದಿದ್ದಾರೆ. ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದಲ್ಲಿ 2 ವರ್ಷಗಳ ಹಿಂದೆ ಮಾನ್ಯ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದ್ದರು. ನಮ್ಮ ಪಕ್ಷಕ್ಕೆ ಧರಣಿಯಲ್ಲಿ ನಂಬಿಕೆ

ಇಲ್ಲ ಎಂದು ಹೇಳಿದ್ದರು. ಅವರು ಪ್ರತಿಭಟನೆ ಮಾಡಿ ಹೊರಗಡೆ ಹೋಗಿದ್ದರು. ಅಂತಹವರೂ ಇವತ್ತು ಧರಣಿ ಮಾಡಬೇಕಾಗಿದೆ, ಇದಕ್ಕೆ ತೀವ್ರ ವಿರೋಧ ಇರುವಾಗ, ಪಕ್ಷದ ಆದೇಶವನ್ನು ಉಲ್ಲಂಘನೆ ಮಾಡಿ ಪಾಪ ಧರಣಿ ಕುಳಿತಿದ್ದಾರೆ. ಈ ಪ್ರತಿಭಟನೆ ಜನರಿಗೆ ಅರ್ಥವಾಗಿದೆ. ಈ ಸರ್ಕಾರಕ್ಕೆ ನಮ್ಮ ಭಾವನೆಗಳು ಅರ್ಥವಾಗುವುದಿಲ್ಲ. ಇಲ್ಲಿ ಅನೇಕ ವಿಚಾರಗಳು ಚರ್ಚೆ ಮಾಡುವಂತಹವು ಇವೆ. ಈ ಬಗ್ಗೆ ಸರ್ಕಾರದ ಪರವಾಗಿ ಏನೂ ಹೇಳುವುದಿಲ್ಲ. ಮಾನ್ಯ ರಾಜಶೇಖರಮೂರ್ತಿಯವರು ಇರುವುದರಲ್ಲಿ ಒಳ್ಳೆಯ ಮಂತ್ರಿಗಳು. 1992ನೇ ಏಪ್ರಿಲ್‌ನಲ್ಲಿ ಖರ್ಚು ಮಾಡಿರುವ ಅಂಕಿಅಂಶಗಳನ್ನು ಅವರು ಹೇಳಿದ್ದಾರೆ. ಕೊಟ್ಟಿರತಕ್ಕದ್ದು ನಮಗೆ 60 ಕೋಟಿ ರೂಪಾಯಿಗಳು ಅಷ್ಟೆ. ಅದೂ ಕೂಡ ಮುಂದಿನ ವರ್ಷದ ಹಣದಲ್ಲಿ ಅಡ್ವಾನ್ಸ್ ಆಗಿ ಕೇಂದ್ರ ಸರ್ಕಾರ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು; ಬೇರೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಇನ್ನು ಕೇಂದ್ರದಿಂದ ಸತ್ತವರಿಗೆ 2 ಲಕ್ಷ ರೂಪಾಯಿ ಕೊಡಿ ಎಂದು ಹೇಳಿದ್ದಾರೆ. ಆದರೆ ಕೊಡುವುದಕ್ಕೆ ಹಣ ಇರಬೇಕಲ್ಲವೇ? ಮೊಯಿಲಿಯವರು ಹೊಸದಾಗಿ ಮುಖ್ಯಮಂತ್ರಿಯಾಗಿದ್ದಾರೆ, ಹೊಸ ಉತ್ಸಾಹ, ನಾನು ಏನು ಹಿಂದಿನವರಿಗಿಂತ ಬಹಳ ಉತ್ತಮ ಇದ್ದೇನೆ ಎಂದು ತೋರಿಸಿಕೊಳ್ಳುವುದಕ್ಕೆ ಒದ್ದಾಡುತ್ತಿದ್ದಾರೆ. ಪಾಪ, ಅವರು ಆದರೂ ಏನು ಮಾಡುತ್ತಾರೆ? ಅವರ ಮಾತಿಗೆ ಏನು ಮರ್ಯಾದೆ, ಮತ್ತು ಗೌರವ ಸಿಗುತ್ತಿಲ್ಲ. ಅದನ್ನೆಲ್ಲಾ ನಾವು ಜನಗಳಿಗೆ ತಿಳಿಸುವ ದೃಷ್ಟಿಯಿಂದ ಸಫಲರಾಗಿದ್ದೇವೆಂದು ನಾವು ಅಂದುಕೊಂಡಿದ್ದೇವೆ ಮತ್ತು ಇವರನ್ನು ಎಕ್ಸ್‌ಪೋಸ್ ಮಾಡಿದ್ದೇನೆ. ಅವರಿಗೆ ಏನಾದರೂ ತಮ್ಮ ಮಾತನ್ನು ಡಿಫೆಂಡ್ ಮಾಡಬೇಕು ಎಂದಿದ್ದರೆ ಅವರು ಬಂದು ಹೇಳಬೇಕು. ಈ ರೀತಿ ಮಾಡುತ್ತೇವೆ ಎಂದು. ಗೋರಕಲ್ಲು ಮೇಲೆ ನೀರು ಸುರಿದಂತೆ ಇವರಿಗೆ ಏನೂ ಅರ್ಥವಾಗುವುದಿಲ್ಲ. ಆದ್ದರಿಂದಾಗಿ ಈ ಪ್ರತಿಭಟನೆ ಇಲ್ಲಿ ನಿಲ್ಲಿಸಿ ವಾಪಸ್ಸು ಬರಬೇಕೆಂದು ಹೇಳಿ ನಾನು ಇದರಲ್ಲಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು:– ಸರ್ಕಾರದವರು ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಕಂದಾಯ ಮಂತ್ರಿಗಳು ಈ ಚರ್ಚೆಗೆ ಸೂಕ್ತವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಭಾರತೀಯ ಜನತಾ ಪಾರ್ಟಿಯ ಸದಸ್ಯರಿಗೆ ಮತ್ತು ಜನತಾ ದಳದ ಸದಸ್ಯರಿಗೆ ಸಮಾಧಾನ ಆಗಿಲ್ಲ. ಅದಕ್ಕೋಸ್ಕರ ದಳದ ಸದಸ್ಯರು ಸಭೆಯಿಂದ ನಿರ್ಗಮಿಸಿದರು. ಭಾರತೀಯ ಜನತಾ ಪಕ್ಷದವರು ಇಲ್ಲಿ ಧರಣಿ ಹೂಡಿದರು, ತಮ್ಮ ಅಸಮಾಧಾನವನ್ನು ಮಾನ್ಯ ಸದಸ್ಯರು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಆದರೂ ತಮ್ಮ ಭಾವನೆಗಳು ಏನು ಇವೆ ಅದನ್ನು ನಾನು ಮಾನ್ಯ ಮುಖ್ಯಮಂತ್ರಿಗಳವರಿಗೆ ಪುನಃ ತಿಳಿಸುತ್ತೇನೆ. ದಯಮಾಡಿ ಮುಂದಿನ ಕಾರ್ಯ ಕಲಾಪಗಳಿಗೆ ಅವಕಾಶ ಕೊಡುವ ಸಲುವಾಗಿ ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿ. ಬೈರೇಗೌಡ:– ಈಗ ನಮ್ಮ ಸ್ನೇಹಿತರ ಒತ್ತಾಯ ಏನು ಇದೆ ಎಂದರೆ, ಕನಿಷ್ಠ ಪಕ್ಷ ಈ ಸದನದ ಒಂದು ಸಮಿತಿಯನ್ನಾದರೂ ಮಾಡಿ. ಆದರೆ, ತಮಗೂ ಕೂಡ ಅರಿವು ಆಗಬೇಕು ರಾಜ್ಯದ ಜನತೆಗೂ ಅರಿವು ಆಗಬೇಕು. ಆದ್ದರಿಂದ ಈ ಸದನದ ಒಂದು ಸಮಿತಿ ಹೋಗಿ ಅದನ್ನು ನೋಡಿ ತತ್‌ಕ್ಷಣ ಒಂದು ವಾರದಲ್ಲಿ ಅಥವಾ 8–10 ದಿವಸಗಳಲ್ಲಾದರೂ ಒಂದು ವರದಿಯನ್ನು ಕೊಟ್ಟು, ಸರ್ಕಾರ ಏನಾದರೂ ಸರಿಯಾದ ವ್ಯವಸ್ಥೆಯನ್ನು, ಪರಿಹಾರವನ್ನು ಮತ್ತೊಂದು ಎಲ್ಲವನ್ನೂ ಕೂಡ ಸರಿಯಾಗಿ ಮಾಡಿದರೆ ಒಪ್ಪಿಕೊಳ್ಳೋಣ. ನೀವು ಮಾಡಿರತಕ್ಕಂಥ ಅನೇಕ ಕೆಲಸವನ್ನು ನಾವು ಒಪ್ಪಿದ್ದೇವೆ. ಅದೇ ರೀತಿ ಒಳ್ಳೆಯ ಕೆಲಸ ನೀವು ಮಾಡಿದ್ದರೆ ಸದನದ ಸಮಿತಿಯವರು ನಿಮಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಲೋಪದೋಷಗಳು ಏನಾದರೂ ಇದ್ದರೆ ಅವು ಕೂಡ ಹೊರಗೆ ಬರುತ್ತವೆ. ಆದರಿಂದ ಜನತೆಗೆ ಏನು ಅನಾನುಕೂಲ ಆಗಿದೆ, ಈಗ ಏನು ತೊಂದರೆಗೆ ಸಿಕ್ಕಿ ಹಾಕಿಕೊಂಡಿದ್ದಾರೆ ಅವರಿಗೆ ಒಂದಿಷ್ಟು ಅನುಕೂಲ ಆಗುತ್ತದೆ ಮತ್ತು ಕಷ್ಟ

ಏನು ಇದೆ ಆ ಕಷ್ಟ ನಿವಾರಣೆ ಆಗತಕ್ಕಂಥ ಒಂದು ಪ್ರಾಮಾಣಿಕವಾದ ಪ್ರಯತ್ನ ಮಾಡಿದಂತಾಗುತ್ತದೆ. ಆದ್ದರಿಂದ ದಯಮಾಡಿ ಒಂದು ಸದನದ ಸಮಿತಿಯನ್ನು ಮಾಡುವುದಕ್ಕೆ ಸರ್ಕಾರದವರು ಒಪ್ಪಿಕೊಳ್ಳಲಿ ಮತ್ತು ನಮ್ಮ ವಿರೋಧ ಪಕ್ಷದ ನಾಯಕರನ್ನು ಕೂಡ ಕರೆದು ಈಗ ತಾವು ಒಂದು ತೀರ್ಮಾನಕ್ಕೂ ಸಹಾ ಈ ವಿಚಾರದಲ್ಲಿ ಬರಬಹುದು. ಯಾವ ರೀತಿ ಸದನದ ಸಮಿತಿ ಮಾಡಬೇಕೆಂಬುದರ ಬಗ್ಗೆ ತಾವು ಕರೆದಂಥ ಸಭೆಗೆ ಬರುವುದಕ್ಕೆ ಸಿದ್ಧರಿದ್ದೇವೆ. ಪಾಸಿಟೀವ್ ರೆಸ್ಪಾನ್ಸ್ ಕೊಡಿ. ನೀವು ಅಲ್ಲಿ, ಯಡಿಯೂರಪ್ಪನವರು ಇಲ್ಲಿ ಆಗುವುದು ಬೇಡ. ನೊಂದ ಜನರಿಗೆ ತೊಂದರೆಯಾಗುವುದು ಬೇಡ. ಈ ಸಲಹೆಯನ್ನು ಪರಿಶೀಲಿಸಿ ಒಂದು ಮಾತು ಹೇಳಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಿನ್ನೆ ಕಂದಾಯ ಸಚಿವರು ನೆರೆಹಾವಳಿ ಬಗ್ಗೆ ಕೊಟ್ಟಂಥ ಉತ್ತರದಲ್ಲಿ ಸಚಿವರ ಪ್ರಾಮಾಣಿಕತೆ ಬಗ್ಗೆ ನಾವೇನು ಇಲ್ಲಿ ಪ್ರಶ್ನೆ ಮಾಡಿ ಅಥವಾ ಅವರ ವಿರೋಧ ಇಲ್ಲಿ ಧರಣಿ ಮಾಡುತ್ತಿದ್ದೇವೆ ಅಥವಾ ಸರ್ಕಾರದ ವಿರುದ್ಧ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದು ಅಲ್ಲ. ಕೇಂದ್ರ ಸರ್ಕಾರ ನೆರೆಹಾವಳಿ ಪರಿಸ್ಥಿತಿಗೆ ಯಾವ ರೀತಿ ಸ್ಪಂದಿಸಬೇಕಾಗಿತ್ತು ಅದರಲ್ಲಿ ಒಂದು ಭಾಗವೂ ಸರಿಯಾದ ರೀತಿಯಲ್ಲಿ ಕೇಂದ್ರ ಸರ್ಕಾರ ಸ್ಪಂದಿಸಲಿಲ್ಲ, ಪ್ರಧಾನ ಮಂತ್ರಿಗಳೂ ಸಹಿತ ಕೇರಳಕ್ಕೆ ಬಂದರು, ಬೇರೆ ಕಡೆ ಹೋದರು, ಕರ್ನಾಟಕವನ್ನು ಕಡೆಗಣಿಸಿದರು. ನಮ್ಮ ಸರ್ಕಾರದವರು ಅವರನ್ನು ಕರೆದು ತರತಕ್ಕಂಥ ವ್ಯವಸ್ಥೆಯಲ್ಲಿ ವಿಫಲರಾಗಿದ್ದಾರೆ, ಮತ್ತು ಹಣಕಾಸಿನ ಸಹಕಾರ ಕೇಳುವುದರಲ್ಲಿ, ಇವರು ಎಷ್ಟು ಕೇಳಿದ್ದರೂ, ಕೇಂದ್ರ ಸರ್ಕಾರ ಇವರ ಕಡೆ ಗಮನ ಕೊಟ್ಟಿಲ್ಲ. ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಕೇಂದ್ರ ಸರ್ಕಾರದವರು. ನಾವಾದರೂ ಈ ಅನ್ಯಾಯವನ್ನು ಪ್ರತಿಭಟಿಸಿ ಒಂದು ಕಡೆ ಭಾರತೀಯ ಜನತಾ ಪಾರ್ಟಿಯವರು ಧರಣಿ ಮಾಡಿದ್ದಾರೆ, ನಾನೂ ಧರಣಿ ಮಾಡಿದ್ದೇನೆ. ಮತ್ತೊಂದು ಕಡೆ ಈ ಜನತಾ ದಳದವರು ಈ ಒಂದು ನೋವನ್ನು ಅನುಭವಿಸಿ ಸಭಾತ್ಯಾಗ ಮಾಡಿದ್ದಾರೆ. ಕೊನೆಯದಾಗಿ ತಮ್ಮಲ್ಲಿ ನಾನು ಒಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ನಿಮ್ಮದು ಭಾಗಶಃ ಧರಣಿ.

ಶ್ರೀ ವಾಟಾಳ್ ನಾಗರಾಜ್:– ಇಲ್ಲಾ ಇಲ್ಲಾ ಭಾಗಶಃ ಅಲ್ಲ ಮತ್ತೆ ಬರುತ್ತೇನೆ.

ಅಧ್ಯಕ್ಷರು:– ಅದಕ್ಕೆ ಹೇಳಿದ್ದು, ನಾನು ಭಾಗಶಃ ಧರಣಿ ಎಂದು.

ಶ್ರೀ ವಾಟಾಳ್ ನಾಗರಾಜ್:– ಆದ್ದರಿಂದ ತಮಗೆ ನಾನು ಹೇಳುತ್ತೇನೆ. ತಮಗೆ ಗೊತ್ತಿರುವ ಹಾಗೆ ಆ ಗುಲ್ಬರ್ಗ ಮತ್ತು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಬರಗಾಲದ ಭೀಕರವಾದಂತ ಪರಿಸ್ಥಿತಿ ಬಂದಾಗ 1972ರಲ್ಲಿ ಇದೇ ಸದನದ ಒಂದು ಸಮಿತಿಯನ್ನು ಅಲ್ಲಿ ಕಳುಹಿಸಿತ್ತು. ಆವಾಗ ನಾವೆಲ್ಲಾ ಹೋಗಿದ್ದೆವು. ನಾವು ಬೈರೇಗೌಡರು, ದೇವೇಗೌಡರು ಬಂದಿದ್ದರು ಮತ್ತು ಹೆಚ್.ಎಂ. ಚೆನ್ನಬಸಪ್ಪನವರ ಮುಖಂಡತ್ವದಲ್ಲಿ ಎಲ್ಲಾ ಪ್ರದೇಶಗಳನ್ನು ಸುತ್ತಿ ಬಂದು ವರದಿಯನ್ನು ಈ ಸದನಕ್ಕೆ ತಂದು ತಮಗೆ ಒಪ್ಪಿಸಿದಂಥ ಒಂದು ನಿದರ್ಶನ ಇದೆ. ಅಧ್ಯಕ್ಷರೇ, ಮುಂದಾಗಿ ಈ ಪರಿಸ್ಥಿತಿ ಅರಿತುಕೊಂಡು ಸರ್ಕಾರದ ಜೊತೆಯಲ್ಲಿ ಮಾತನಾಡುವುದು ತಮಗೆ ಸೇರಿದ್ದುದು, ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಈ ಸದನದ ಒಂದು ಸಮಿತಿಯನ್ನು ಮಾಡಿ ಕರ್ನಾಟಕದ ಯಾವ ಯಾವ ಮೂಲೆಯಲ್ಲಿ ನೆರೆಹಾವಳಿಯಿಂದ ಜನ, ಜಾನುವಾರುಗಳು ಏನು ತೊಂದರೆ ಅನುಭವಿಸುತ್ತಿದ್ದಾರೆ, ಏನೇನು ನಷ್ಟವಾಗಿದೆ, ಕರ್ನಾಟಕಕ್ಕೆ ಅನ್ವಯವಾಗಿದೆ ಎನ್ನತಕ್ಕಂಥ ಒಂದು ವರದಿಯನ್ನು ತತ್‌ಕ್ಷಣ ತರಿಸಿ ಆ ವರದಿಯ ಆಧಾರದ ಮೇಲೆ ಸರ್ಕಾರ ಪರಿಹಾರ ಕೊಡತಕ್ಕಂಥ ಒಂದು ವ್ಯವಸ್ಥೆ ಮಾಡತಕ್ಕಂಥದ್ದು. ಇದಕ್ಕೆ ಮುಂಚಿತವಾಗಿ ಈ ಸದನದ ಸಮಿತಿ ಮಾಡತಕ್ಕಂಥ ಅಧಿಕಾರ ತಮಗೆ ಇದೆ. ತಮ್ಮನ್ನು ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ. ಸದನದ ಮೂಲಕ ಒಂದು ಸಮಿತಿಯನ್ನು ಮಾಡಿ, ಎಲ್ಲೆಲ್ಲಿ ಕರ್ನಾಟಕದ ವಿರೋಧ ಪಕ್ಷದ ಮುಖಂಡರುಗಳು ಆ

ಕಡೆ ಪಕ್ಷದವರು, ಬರಲಿ, ಪಕ್ಷಾತೀತವಾಗಿರಲಿ, ಇದರಲ್ಲಿ ನಾವು ಏನು ನಮ್ಮದೇ ಒಂದು ಎನ್ನತಕ್ಕಂಥದ್ದಲ್ಲಿ ಇಲ್ಲ. ಪಕ್ಷಾತೀತವಾಗಿ ನಮ್ಮ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯವನ್ನು ನಾವು ತೀವ್ರವಾಗಿ ಪ್ರತಿಭಟಿಸುತ್ತಿದ್ದೇವೆ. ಆದುದರಿಂದ ಈ ಸದನದ ಸಮಿತಿ ಮಾಡತಕ್ಕಂಥ ಅಧಿಕಾರ ತಮಗೆ ತಾವು ಮಾಡಬೇಕೆಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಬಹುಶಃ ಸರ್ಕಾರವು ತಾವು ಮಾಡಿದರೂ ಅದನ್ನು ವಿರೋಧ ಪಕ್ಷದವರ ಮುಖಂಡರನ್ನು ಕರೆದು ಮಾತನಾಡಿ ನಾವೇನು ಮಾಡೋಣ ಎನ್ನತಕ್ಕಂಥ ಒಂದು ಸಲಹೆಯನ್ನು ಸರ್ಕಾರದ ಕಡೆ ಬಂದರೆ ನಾವು ಆ ಬಗ್ಗೆ ಒಂದು ಪರಿಶೀಲನೆ ಮಾಡೋಣ ಎಂದು ಹೇಳಿ ಮತ್ತೆ ನಾನು ಧರಣಿಗೆ ಬರುತ್ತಿದ್ದೇನೆ.

ಅಧ್ಯಕ್ಷರು:- ನಿಮಗೆ ಉತ್ತರ ಬರುವವರೆಗೂ ಅಲ್ಲಿಯೇ ಕುಳಿತುಕೊಳ್ಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅಧ್ಯಕ್ಷರೇ ಈಗಾಗಲೇ ಸರ್ಕಾರ ಅನೇಕ, ಸಮಸ್ಯೆಗಳ ಬಗ್ಗೆ ಸ್ಪಂದನೆ ಮಾಡುತ್ತಿದೆ. ರೈತರ ಸಮಸ್ಯೆ ಬಂದಾಗ, ಈ ರೀತಿ ಎಂದೂ ಕಾಣದಂಥ ಮಹಾಪೂರ ಬಂದು ಇವತ್ತು ಬೆಳೆಗಳು ನಾಶವಾಗಿವೆ. ಪಂಪಸೆಟ್‌ಗಳು ಹಾಳಾಗಿವೆ. ಈಗ ಪುನಃ ಬೆಳೆಯನ್ನು ಇಡಲಿಕ್ಕೆ ಬೀಜ, ಗೊಬ್ಬರ ಇಲ್ಲದಂಥ ಕಾಲದಲ್ಲಿ ತಮ್ಮ ಉತ್ತರವನ್ನು ಪರಿಶೀಲಿಸಿ ನೋಡಿದರೆ, ಇಡೀ ರಾಜ್ಯದಲ್ಲಿ ಒಂದು ಕಾಸನ್ನು ಸಹಿತ ರೈತರಿಗೆ ಬೆಳೆ ಹಾನಿಗೆ ಇವತ್ತಿನ ಸರ್ಕಾರ ಕೊಟ್ಟಿಲ್ಲ ಎಂದರೆ ಇದು ಎಷ್ಟರಮಟ್ಟಿಗೆ ರೈತರ ಬಗ್ಗೆ ಸರ್ಕಾರ ಒಂದು ಚಿಂತನೆ ಮಾಡುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಮಾತಿನಲ್ಲಿ ಮಾತ್ರ ಬಹಳ ತೊಂದರೆ ಆಗಿದೆ ಎನ್ನುವುದೇ ಕೊಟ್ಟಿರತಕ್ಕಂಥ ಪರಿಹಾರವಾಗಿದೆ. ಅಧ್ಯಕ್ಷರೇ ಒಂದು ಪೈಸೆಯನ್ನೂ ಸಹಿತ ಬೆಳೆಹಾನಿಗೆ ಕೊಟ್ಟಿಲ್ಲ ಎಂದು ಸರ್ಕಾರ ಉತ್ತರ ಹೇಳುತ್ತಿದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯದ ಬಗ್ಗೆ ತಳೆದಿರತಕ್ಕಂಥ ಧೋರಣೆ, ಮಲತಾಯಿ ಧೋರಣೆ. ಅವರು ಯಾವುದನ್ನೂ ಕೊಟ್ಟಿಲ್ಲ, ಕೊಟ್ಟಿರತಕ್ಕಂಥದ್ದು ಜವಾಹರ್ ರೋಜಗಾರ್ ಅಥವಾ ಅತಿವೃಷ್ಟಿ ವಿಕೋಪದಿಂದ ನ್ಯಾಚುರಲ್ ಕೆಲಾಮಿಟಿಗೆ ಮುಂದಿನ ವರ್ಷದ ಹಣವನ್ನು ಏನು ಕೊಡಬೇಕಾಗಿತ್ತು ಅದನ್ನು ಕೊಟ್ಟಿದ್ದಾರೆ. ಈ ರೀತಿ ಮಾಡಿದರೆ ಕೇಂದ್ರ ಸರ್ಕಾರದ ಬಗ್ಗೆ ನಾವು ಗಮನಹರಿಸಬೇಕಾಗಿದೆ ಮತ್ತು ಸಭಾತ್ಯಾಗ ಮಾಡದೆ ಧರಣಿ ಮಾಡುತ್ತಿದ್ದೇವೆ. ರಾಜ್ಯ ಸರ್ಕಾರ ಉಳಿದೆಲ್ಲಾ ಸಮಸ್ಯೆಗಳ ಬಗ್ಗೆ ಪೂರ್ಣವಾಗಿ ಸ್ಪಂಧಿಸದಿದ್ದರೂ ಸಹ ಸ್ವಲ್ಪ ಮಟ್ಟಿಗಾದರೂ ರೈತರ ಸಮಸ್ಯೆಗಳ ಬಗ್ಗೆ ಸ್ಪಂಧಿಸಬೇಕಾಗುತ್ತದೆ. ಗೊಬ್ಬರದ ಬೆಲೆಯು ವಿಪರೀತವಾಗಿದೆ. ಮಹಾಪೂರದ ಹಾನಿಗೆ ರೈತರು ಒಳಗಾಗಿದ್ದಾರೆ. ಅವರಿಗೆ ಉಪಜೀವನ ಮಾಡುವುದಕ್ಕೆ ಕಷ್ಟವಾಗಿದೆ. ರಾಜ್ಯದ ರೈತರಿಂದ ಆಶೀರ್ವಾದವನ್ನು ಪಡೆದು ಅಧಿಕಾರಕ್ಕೆ ಬಂದಂಥ, ಅಧಿಕಾರದಲ್ಲಿರತಕ್ಕಂಥ ಸರ್ಕಾರವಾಗಲೀ, ನಾವಾಗಲಿ ಇದರ ಬಗ್ಗೆ ಚಿಂತನೆ ಮಾಡದಿದ್ದರೆ, ಇದರ ಬಗ್ಗೆ ಸಾಧ್ಯವಿದ್ದಷ್ಟು ಸರ್ಕಾರ ತನ್ನ ಕಳಕಳಿಯನ್ನು ತನ್ನ ಒಂದು ಸಹಾಯದ ಹಸ್ತವನ್ನು ಚಾಚದೆ ಹೋದರೆ, ಜನ ನಮ್ಮನ್ನು ಎಂದಿಗೂ ಕ್ಷಮಿಸುವುದಿಲ್ಲ, ಸರ್ಕಾರವನ್ನು ಕ್ಷಮಿಸುವುದಿಲ್ಲ. ದಯವಿಟ್ಟು ಸಮರೋಪಾವಧಿಯಲ್ಲಿ ಈಗಲಾದರೂ ಪರಿಹಾರ ಕಾರ್ಯಗಳನ್ನು ಪ್ರಾರಂಭಿಸಿ ಬೆಳೆಯ ಹಾನಿಗೆ, ತೀವ್ರ ಅವರಿಗೆ ಸಹಾಯ ಕೊಡಬೇಕು. ಮತ್ತೆ ಅವರು ಹೇಳುತ್ತಿದ್ದಾರೆ ರೈತರಿಗೆ ಕಿಟ್ಸ್ ಕೊಡುತ್ತಿದ್ದೇವೆಂದು. ಇದು ಮಹಾ ಮೋಸ, ಕಿಟ್ಸ್ ಅಂದರೆ 2 ಕೆಜಿ ಬೀಜ, 10 ಕೆಜಿ ಗೊಬ್ಬರ ಎಣ್ಣೆ ಹೊಡೆಯುವುದಕ್ಕೆ ಒಂದು ಡಬ್ಬಿ ಕೊಟ್ಟಿದ್ದಾರೆ. ರೈತರಿಗೆ ಇದರಲ್ಲಿ ಭ್ರಷ್ಟಾಚಾರ ಪ್ರಾರಂಭವಾಗುತ್ತದೆ.

ಶ್ರೀ ಸಿ. ಬೈರೇಗೌಡ:- ಎಣ್ಣೆ ಎಂದರೆ ಎಣ್ಣೆ ಹಾಕಿದ್ದಾನೆ, ಇವನೇನೋ ಸಾರಾಯಿ ಕುಡಿದಿದ್ದಾನೆ ಎಂದು ಅರ್ಥ.

ಶ್ರೀ ಬಿ.ಹೆಚ್. ಬನ್ನಿಕೋಡ್:- ನಮ್ಮಲ್ಲಿ ಹೊಲಕ್ಕೆ ಹೊಡೆಯುವ ಔಷಧಿಗೆ ಕ್ರಿಮಿನಾಶಕ ಎಣ್ಣೆ ಅಂತ ಹೇಳುತ್ತಾರೆ. ಅದನ್ನು ಕೊಟ್ಟರೆ ರೈತ ಏನು ಮಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಭ್ರಷ್ಟಾಚಾರವಾಗುತ್ತದೆ. 108 ಸಂಶಯಕ್ಕೆ ಎಡೆಯನ್ನು ಕೊಡುತ್ತದೆ, ಕ್ರಿಮಿನಾಶಕಕ್ಕೆ ಈ

ಎಣ್ಣೆಯನ್ನು ಕೊಡುತ್ತಿದ್ದಾರೆ. ಅದು ಏತಕ್ಕೆ ಎಂದರೆ ರೈತನ ಸಮಸ್ಯೆ ಪರಿಹಾರವಾಗದಿದ್ದಾಗ ಎಣ್ಣೆಯನ್ನು ಕುಡಿದು ತಾನು ಸಂತೋಷದಿಂದ ಇರಬಹುದು, ಅಂತ ಸರ್ಕಾರದ ಯೋಜನೆಯೇ? ನಿಮಗೆ ಗೊತ್ತಿದೆ. 200 ರೂಪಾಯಿ ಇದ್ದ ಬೀಜವನ್ನು 1000 ರೂಪಾಯಿ ಅಂತ ಹೇಳಿ ಆ ಬೀಜಗಳನ್ನು ಪರಿಹಾರದಿಂದ ತಂದ ಹಣ ಸ್ವೋಟ ಆಗುತ್ತದೆ. ಗೊಬ್ಬರ ಕಡಿಮೆ ಬೆಲೆ ಸಿಗುತ್ತದೆಂದು 2ರಷ್ಟು ಹೆಚ್ಚಿಗೆ ಹಾಕಿ ಅದನ್ನು ಕೊಡುತ್ತಿದ್ದಾರೆ. ಔಷಧಿ ಅದೇ ರೀತಿ ಕಂಪೆನಿಗಳ ಜೊತೆಯಲ್ಲಿ ಶಾಮಿಲಾಗಿ ಕೊಡತಕ್ಕಂಥ ಪರಿಹಾರ ಸಹಿತ ಇವತ್ತು ಭ್ರಷ್ಟಾಚಾರ ತಾಂಡವಾಡುವಂಥ ರೀತಿಯಾಗಿದೆ. ಅದನ್ನು ಹಣದ ರೂಪದಲ್ಲಿ ಕೊಡಬೇಕು. ರೈತರಿಗೆ ಕೊಡತಕ್ಕಂಥ ಪರಿಹಾರವನ್ನು ಕಿಟ್ಸ್ ರೀತಿಯಲ್ಲಿ ಕೊಡುವುದನ್ನು ನಿಲ್ಲಿಸಬೇಕು. ದಯವಿಟ್ಟು ಅದನ್ನು ಹಣದ ರೀತಿಯಲ್ಲಿ ಕೊಡಬೇಕು. ಎಕರೆಗೆ ಐದುನೂರು ರೂಪಾಯಿಗಳನ್ನು ಕೊಡುವಂತೆ, ಸರ್ಕಾರ ಇಷ್ಟಾದರೂ ಮಾಡಬೇಕೆಂದು ಹೇಳುತ್ತೇನೆ. ಕಷ್ಟದಲ್ಲಿ ಇರತಕ್ಕ ರೈತರಿಗೆ ಪರಿಹಾರ ಕೊಡಬೇಕು. ಅತಿವೃಷ್ಟಿ ಅನಾವೃಷ್ಟಿಯಾಗಿದೆ, ಸಾಲ ಮನ್ನಾ ಮಾಡದೇ ಇದ್ದರೆ ಬಡ್ಡಿಯನ್ನಾದರೂ ಮನ್ನಾ ಮಾಡಿ ರೈತರ ಸಹಾಯಕ್ಕೆ ಬರಬೇಕು ಎಂದು ಕೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬೈರೇಗೌಡರು ಹೇಳಿದಂತಹ ಸಲಹೆಗಳನ್ನು ನಾನು ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಮತ್ತೊಂದು ವಿಷಯ ಏನೆಂದರೆ ಈಗ ನೆರೆಹಾವಳಿಯಿಂದ ಜನಗಳಿಗೆ ತೊಂದರೆ ಆಗಿ ಎರಡು ತಿಂಗಳು ಆಯಿತು. ಎರಡು ತಿಂಗಳಿನಿಂದ ಅನೇಕ ಪರಿಹಾರ ಕಾರ್ಯಗಳು ನಡೆದಿದೆ. ನಮ್ಮ ಮನಸ್ಸಿಗೆ ಸಮಾಧಾನವಾಗುವಷ್ಟು ರೀತಿಯಲ್ಲಿ ಇಲ್ಲದಿರಬಹುದು. ಆದರೆ ನಡೆದಿದೆ. ಎರಡು ತಿಂಗಳ ನಂತರ ಸಮಿತಿ ಹೋಗಿ ನೋಡುವುದು ಅಷ್ಟು ಸೂಕ್ತವಲ್ಲ. ಅಧ್ಯಕ್ಷರೇ ಸಮಿತಿ ರಚನೆ ಮಾಡಲಿ ಅಥವಾ ಸರಕಾರದವರೇ ಸಲಹೆ ಮಾಡಿ ರಚನೆ ಮಾಡಿಸಲಿ, ಸಮಿತಿ ಹೋಗಿ ನೋಡತಕ್ಕದ್ದು ಏನಿದೆ? ಈಗಾಗಲೇ ಎಲ್ಲಾ ವರದಿಗಳು ಬಂದಿವೆ. ಅದರ ಬಗ್ಗೆ ರಿಪೋರ್ಟನ್ನು ಕೊಟ್ಟಾಗಿದೆ, ಎಲ್ಲಾ ಚರ್ಚೆಯಾಗಿದೆ. ಆದುದರಿಂದ ತಮ್ಮ ಭಾವನೆಗಳು ಏನು ಇವೆ ಅವನ್ನು ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಅವರು ಸಭೆ ಮುಕ್ತಾಯವಾಗುವ ಹೊತ್ತಿಗೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನಾನು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ನಾನು ಮಾತನಾಡಿ ಮುಗಿಸುತ್ತೇನೆ, ಆಮೇಲೆ ತಾವು ಮಾತನಾಡಿ. ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿಯಾಗಿದೆ. ಆದುದರಿಂದ ದಯವಿಟ್ಟು ಬಂದು ತಮ್ಮತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕು ಎಂದು ಕೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಧರಣಿ ನಡೆಸತಕ್ಕಂತಹ ಸ್ನೇಹಿತರಿಗೆ ಹೇಳುತ್ತೇನೆ, ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿ ಇಲ್ಲ, ಮೂಗು ಇಲ್ಲ. ತಾವು ಧರಣಿ ಮಾಡಿದರೆ ಅದಕ್ಕೆ ಸ್ಪಂದಿಸುತ್ತಾ ಇಲ್ಲ. ದಯವಿಟ್ಟು ತಾವು ಬರಬೇಕು. ರೈತರ ಬಗ್ಗೆ ಸ್ಪಂದಿಸುವಂತಹ ಸರ್ಕಾರ ಇದಲ್ಲ ಎಂದು ಸ್ಪಷ್ಟವಾಗಿದೆ. ದಯವಿಟ್ಟು ತಾವು ಬಂದು ತಮ್ಮ ಸ್ಥಾನದಲ್ಲಿ ಕುಳಿತು ಮುಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಅತ್ಯಂತ ಪ್ರಮುಖವಾದಂತಹ ಕೆಲವು ವಿಷಯಗಳು ಕೊನೆಯ ದಿವಸ ಚರ್ಚೆ ಆಗಬೇಕಾಗಿದೆ. ವಿರೋಧ ಪಕ್ಷದ ನಾಯಕರು ಎಲ್ಲಾ ಸೇರಿ, ಈ ಫರ್ಟಿಲೈಸರ್ ಬಗ್ಗೆ ಸಬ್ಸಿಡಿ ವಾಪಸ್ಸು ತೆಗೆದುಕೊಂಡಿದ್ದರಿಂದ ಆಗಿರುವಂತಹ ಕೆಟ್ಟ ಪರಿಣಾಮದ ಬಗ್ಗೆ ಚರ್ಚೆ ಆಗಬೇಕಾಗಿದೆ. ಒಂದು ರೀತಿ, ಭಾರತೀಯ ಜನತಾ ಪಾರ್ಟಿ ಸದಸ್ಯರು ಇಲ್ಲಿ ಆಗುವಂತಹ ಕಾರ್ಯಕಲಾಪಕ್ಕೆ ಅಡ್ಡಿ ಮಾಡುವಂತಹ ಪ್ರಯತ್ನ ಮಾಡಿದರು ಎಂದು ಹೇಳಿ ನಮ್ಮ ಮೇಲೆ ಗೂಬೆ ಕೂರಿಸುವಂತಹ ಪ್ರಯತ್ನ ಆಗಬಹುದು. ಅದಕ್ಕೆ ನಾನು ಆ

ಆರೋಪವನ್ನು ಹೊರಿಸಿಕೊಳ್ಳುವುದಕ್ಕೆ ಸಿದ್ಧವಿಲ್ಲ, ಕಾರ್ಯಕಲಾಪ ನಡೆಯಲಿ. ಏಕೆಂದರೆ ಸರ್ಕಾರಕ್ಕೆ ಹೀಗೆ ಆಗಬೇಕು, ಹೀಗೆ ಮಾಡಬೇಕು ಎಂದು ನಾವು ಸಲಹೆ ಕೊಡಬಹುದೇ ಹೊರತು ಆಗಲೇಬೇಕು ಅಂತ ಒತ್ತಡವನ್ನು ತರುವಂತಹ ಶಕ್ತಿ ಭಗವಂತ ನಮಗೆ ಇನ್ನು ಕೊಟ್ಟಿಲ್ಲ. ನಾವು ಇರುವವರು ನಾಲ್ಕು ಜನ. ಆದರಿಂದ ಇಷ್ಟೇ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನಮ್ಮ ರಾಜ್ಯದ ಯಾವ ರೈತ ನೆರೆಹಾವಳಿಗೆ ತುತ್ತಾಗಿದ್ದಾನೆ, ನಿನ್ನೆ ಅವರು ಕೊಟ್ಟಂತಹ ಉತ್ತರದಲ್ಲಿ ಅವನ ಕಣ್ಣೀರನ್ನು ಒರೆಸುವಂತಹ ಒಂದೂ ವಿಷಯ ಇರಲಿಲ್ಲ. ಆದಕ್ಕೆ ನಾನು ಏನು ಸಲಹೆ ಕೊಟ್ಟೆ ಅಲ್ಲಿ ಹಾಳಾಗಿರುವುದನ್ನು ತಾವು ಹೋಗಿ ನೋಡಿದ್ದೀರಿ, ಅಲ್ಲಿ ಏನು ಹಾಳಾಗಿದೆ ಅದನ್ನು ತುಂಬಿಕೊಡುವುದಕ್ಕೆ ಅದರ ಆಧಾರದ ಮೇಲೆ ಪರಿಹಾರ ಒದಗಿಸಿಕೊಡುವುದಕ್ಕೆ ಅವನನ್ನು ಮೇಲೆ ಎಬ್ಬಿಸುವುದಕ್ಕೆ ಮೊದಲನೆಯ ದಿವಸವೇ ಏನಾದರೂ ಪ್ರಯತ್ನ ಮಾಡಬಹುದೇನೋ ಎಂದು ಸಲಹೆ ಕೊಟ್ಟೆ. ನಾನು ಏನು ಹೇಳಿದೆ ಅಧ್ಯಕ್ಷರೆ, ಯಾವ ಲಾಸ್ ಆಗಿದೆ, ಅವರ ಲೆಕ್ಕದ ಪ್ರಕಾರ ಒಂದು ಎಕರೆಗೆ 4 ಸಾವಿರ ಲಾಸ್, ಆಗುತ್ತದೆ ಖರ್ಚು ಬರುತ್ತದೆ ಎಂದು ಹೇಳುತ್ತಾರೆ. ಲಾಸ್ ಆಗಿರುವಂತಹ, ಪೂರ್ಣ ಬೆಳೆ ನಾಶ ಆಗಿರುವವರಿಗೆ ಆ 4 ಸಾವಿರ ರೂಪಾಯಿ ಪರಿಹಾರವನ್ನಾದರೂ ಕೊಡಿ. ಯಾವ ರೈತರಿಗೆ ಪೂರ್ತಿ ಬೆಳೆ ನಾಶವಾಗಿದೆ ಅವನು ಏನು ಬ್ಯಾಂಕಿನ ಸಾಲ ಪಡೆದಿದ್ದಾನೆ, ಸಹಕಾರ ಸಂಘದ ಸಾಲ ಪಡೆದಿದ್ದಾನೆ, ಆ ಸಾಲವನ್ನು ಮನ್ನಾ ಮಾಡಿ ಎಂದು ಹೇಳಿ ವಿನಂತಿ ಮಾಡಿದ್ದೆ. ಎರಡನೆಯದಾಗಿ 2-10-89ಕ್ಕೆ ಏನು ಆಶ್ವಾಸನೆ ಕೊಟ್ಟಿದ್ದರು, ಅದು ತಮಗೆ ಗೊತ್ತಿದೆ ಅಧ್ಯಕ್ಷರೆ. ತಾವು ರೈತರಾಗಿ ಒಂದು ರೈತ ಕುಟುಂಬದಿಂದ ಬಂದವರು. ನಮ್ಮ ತಪ್ಪಿನಿಂದ ಅಥವಾ ಬೇರೆಬೇರೆ ರಾಜಕೀಯ ಪಕ್ಷದ ತಪ್ಪಿನಿಂದ ನಿನ್ನ ನೆರವಿಗೆ ಬರುತ್ತೇವೆ, ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿ 2-10-89ರಿಂದ ರೈತನಿಗೆ ಬೇರೆ ಸಾಲ ಸಿಗಲಿಲ್ಲ. ಸಹಕಾರ ಸಂಘಗಳು ಸಾಲ ಕೊಡುವಂತಹ ಸ್ಥಿತಿಯಲ್ಲಿ ಇರದೇ ಐದು ಸಾವಿರ ರೂಪಾಯಿ ಸಾಲಕ್ಕೆ ಐದು ಸಾವಿರ ರೂಪಾಯಿಗೆ ಬಡ್ಡಿ ಆಗಿ ಅವನು ಭಿಕ್ಷೆ ಬೇಡುವಂತಹ ಸ್ಥಿತಿಗೆ ಬಂದಿದ್ದಾನೆ. ಅವನ ಬೆಳೆಯೂ ಸಹ ನಾಶವಾಗಿದೆ. ಆದರಿಂದಲಾದರೂ ಸಾಲ ಮನ್ನಾ ಮಾಡಿ, ಅವನನ್ನು ಮೇಲೆ ಎತ್ತುವಂತಹ ಒಂದು ಪ್ರಯತ್ನ ಮಾಡೋಣ ಎನ್ನುವಂತಹ ಸಲಹೆಯನ್ನು ನಾನು ಕೊಟ್ಟೆ. ಇಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ಪ್ರಶ್ನೆ ಏನು ಬರುತ್ತದೆ? ಕೇಂದ್ರದಲ್ಲಿ ಅವರದೇ ಸರ್ಕಾರ ಇದೆ. ರಾಜ್ಯದಲ್ಲಿ ಸರ್ಕಾರ ಇದೆ. ಹೀಗಿರಬೇಕಾದರೆ ಯಾರ ಮೇಲೆ ಯಾರನ್ನು ತೋರಿಸದೆ ರೈತರಿಗೆ ಪರಿಹಾರ ಒದಗಿಸುವ ಕಾರ್ಯ ಮಾಡಬೇಕು. ಅವರೇ ಹೇಳುತ್ತಾರೆ, 300 ಕೋಟಿಗಿಂತಲೂ ಜಾಸ್ತಿ ಲಾಸ್ ಆಗಿದೆ, 100 ಕೋಟಿಗಿಂತಲೂ ಹೆಚ್ಚು ಬೆಳೆ ನಾಶವಾಗಿದೆ ಎಂದು ಅಧ್ಯಕ್ಷರೆ, ನಿನ್ನೆ ಸನ್ಮಾನ್ಯ ಕಂದಾಯ ಸಚಿವರು ಹೇಳಿದಂತಹ ಹೇಳಿಕೆಯಲ್ಲಿ ಕೇಂದ್ರಕ್ಕೆ ಕೊಟ್ಟಂತಹ ಮನವಿ ಏನು ಇದೆ ಅದರ ವಿವರವನ್ನು ಒದಗಿಸಿಕೊಡುವಂತಹ ಪ್ರಯತ್ನವನ್ನು ಮಾಡಿ, ಪೂರಕ ಬೇಡಿಕೆಗಳ ಮೂಲಕ 15 ಕೋಟಿ ರೂಪಾಯಿ ಏನು ಬಿಡುಗಡೆ ಮಾಡಿದ್ದಾರಲ್ಲ ಅದರ ಬಗ್ಗೆ ಪ್ರಸ್ತಾಪ ಮಾಡಿದರೆ ಹೊರತು, ಈ ಬಗ್ಗೆ ದಿಟ್ಟ ನಿಲುವನ್ನು ತೆಗೆದುಕೊಳ್ಳುತ್ತೇವೆ, ಈ ಕೆಲಸ ಮಾಡುತ್ತೇವೆ, ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವನ್ನು ಮಾಡುತ್ತೇವೆ ಎನ್ನುವಂತಹ ಮಾತು ಅವರಿಂದ ಬರಲಿಲ್ಲ. ಆದಕ್ಕಾಗಿ ಈ ಸರ್ಕಾರದ ರೈತ ವಿರೋಧ ನೀತಿಯನ್ನು ಜನ ತೀರ್ಮಾನ ಮಾಡಲಿ. ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಈ ರೀತಿ ಅಜೀರ್ಣ ಆಗುವಂತಹ ಬಹುಮತ ಸಿಕ್ಕಾಗ ನಿಮ್ಮನ್ನು ಪ್ರಭಾವಿತವಾಗಿ ನಮ್ಮ ಗಮನವನ್ನು ಸೆಳೆಯುವುದಕ್ಕೆ ಆಗದೆ ಇರುವಂತಹ ರೀತಿಯಲ್ಲಿ ವಿರೋಧಪಕ್ಷದವರ ಸಂಖ್ಯೆ ಕಡಿಮೆ ಆದಾಗ ಈ ರೀತಿ ಅನಾಹುತಗಳು ಆಗುತ್ತವೆ ಏನೋ ಎಂದು ನನಗನ್ನಿಸುತ್ತದೆ. ರೈತ ನೋವನ್ನು ಅನುಭವಿಸಬೇಕಾಗುತ್ತದೆ. ನಿಮಗೂ ಕಳಕಳಿ ಇದೆ. ನಿಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ತಾವು ಹೇಳಬಹುದು. ನಿಮ್ಮ ಸಲಹೆಗಳನ್ನು ಕೊಡಬಹುದು. ದೇವರು ನಿಮಗೆ ಸದ್ಬುದ್ಧಿಯನ್ನು ಕೊಟ್ಟು, ಇದನ್ನು ನೀವು ಪಾರ್ಟಿ ಮೀಟಿಂಗ್‌ನಲ್ಲಾದರೂ ಚರ್ಚೆಮಾಡಿ. ಇಲ್ಲಿ ಏನಾದರೂ ಘೋಷಣೆ ಮಾಡಿದರೆ, ಯಡಿಯೂರಪ್ಪನವರಿಗೆ ಕ್ರೆಡಿಟ್ ಬರಬಹುದು,

ಬಿಜೆಪಿಗೆ ಕ್ರೆಡಿಟ್ ಬರಬಹುದು ಅಂತ ಹಿಂದುಮುಂದು ನೋಡುತ್ತಿರಬಹುದು. ತಾವು ಅಲ್ಲಾದರೂ ಕುಳಿತು ಯೋಚನೆ ಮಾಡಿ. ಅವನಿಗೆ ನೆರವು ಕೊಡುವಂತಹ ಪ್ರಯತ್ನ ಮಾಡಿ. ನಮ್ಮ ಸದಸ್ಯರು ಬಂದು ಇಲ್ಲಿ ಕುಳಿತುಕೊಳ್ಳುತ್ತಾರೆ ಅಧ್ಯಕ್ಷರೆ. ಈ ಸರ್ಕಾರದ ರೈತ ವಿರೋಧ ನೀತಿಯನ್ನು ಜನಕ್ಕೆ ತಿಳಿಸುವುದಕ್ಕೋಸ್ಕರ ಈ ಕ್ಷಣದಿಂದಲೇ ನಾನು ಇಲ್ಲಿಂದ ಹೊರಟ್ಟಿದ್ದೇನೆ. ಮತ್ತೆ ನಾಳೆ ಅಧಿವೇಶನ ಪ್ರಾರಂಭ ಆಗುವಂತಹ ದಿವಸ ಲಕ್ಷಾಂತರ ಜನ ರೈತರ ಜೊತೆ ಬಂದು ವಿಧಾನಸೌಧ ಮುತ್ತಿಗೆ ಹಾಕುತ್ತೇವೆ, ಇಷ್ಟು ಸುಲಭಕ್ಕೆ ನಿಮ್ಮನ್ನು ಬಿಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾ ರೈತ ವಿರೋಧಿ ನೀತಿ, ಈ ಸರ್ಕಾರದ ನೀತಿಯನ್ನು ಪ್ರತಿಭಟಿಸುತ್ತಾ ಈ ಕ್ಷಣದಿಂದ ಹೊರಟು ನಾಳೆ ವಿಧಾನಸಭೆ ಅಧಿವೇಶನ ಮುಂದಿನ ತಿಂಗಳು 12ನೇ ತಾರೀಖು ಸೇರುವುದರೊಳಗೆ ರಾಜ್ಯದಲ್ಲೆಲ್ಲಾ ಪ್ರವಾಸ ಮಾಡುತ್ತೇನೆ. ನಿಮ್ಮ ರೈತ ವಿರೋಧ ನೀತಿಯನ್ನು ಜನರಿಗೆ ತಿಳಿಸುತ್ತೇನೆ. ಅಜೀರ್ಣ ಆಗುವಷ್ಟು ಬಹುಮತ ಪಡೆದಿರುವಂತಹ ನೀವು ರೈತ ಸಮೂಹಕ್ಕೆ ಏನು ದ್ರೋಹ ಮಾಡುತ್ತಿದ್ದೀರಿ ಅದನ್ನು ಜನತೆಗೆ ತಿಳಿಸುವ ದೃಷ್ಟಿಯಿಂದ ನಾನು ಇಲ್ಲಿಂದ ಹೊರಡುತ್ತಿದ್ದೇನೆ. ನಮಸ್ಕಾರ ಅಧ್ಯಕ್ಷರೆ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ.

10-30 a.m.

ರೈತರ ಕೂಗು, ನೋವು ತಮಗೂ ಗೊತ್ತಿದೆ. ಬಹುಶಃ ಇಲ್ಲಿ ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆಯೇ ಹೊರತು, ಇದು ಪ್ರಚಾರಕ್ಕಾಗಿ ಮಾಡಿದ್ದು ಎಂಬ ದೃಷ್ಟಿಯಲ್ಲ ಎನ್ನುವ ಮಾತನ್ನು ಮತ್ತೊಮ್ಮೆ ತಮಗೆ ತಿಳಿಸುತ್ತಾ, ವಿರೋಧ ಪಕ್ಷದ ನಾಯಕರೂ ಈ ದಿಸೆಯಲ್ಲಿ ನನ್ನ ಜೊತೆಗೆ ನಿಲ್ಲುತ್ತಾರೆ ಅಂದುಕೊಂಡಿದ್ದೇನೆ. ಅವರೂ ಕೂಡ ಸಲಹೆ ಕೊಟ್ಟಿದ್ದಾರೆ. ಮಾನ್ಯ ಸಿಂಧ್ಯರವರೂ ಕೂಡ ಹೇಳಿದರು. ಕೊನೆಯ ಪಕ್ಷ, ನ್ಯಾಯವಾದ ಬೇಡಿಕೆಗಳು ಈಡೇರಬೇಕೆಂದು, ಯಾವ ಮಟ್ಟದ ಹೋರಾಟ ಮಾಡಬೇಕಾಗಿತ್ತೋ, ಅದನ್ನು ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಬಹುಶಃ ಅವರಿಗೆ ಅನಿಸಿರಬಹುದು, ಯಡಿಯೂರಪ್ಪನವರು ರೈತ ಎಂದು ಕೂಗುತ್ತಿದ್ದಾರೆ, ಬಿ.ಜೆ.ಪಿ. ರೈತ ಎಂದು ಕೂಗುತ್ತಿದೆ, ಈ ಸಮಯದಲ್ಲಿ ನೆರವು ಸಿಕ್ಕಿದರೆ, ಅವರಿಗೇ ಲಾಭವಾಗುತ್ತದೆ ಎನ್ನುವ ಭಯ ಇದೆಯೋ ಏನೋ ಗೊತ್ತಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಬಿ.ಜೆ.ಪಿ. ಮತ್ತು ಜನತಾ ದಳ ಭಾಗ ಮಾಡುವುದು ಬೇಕಾಗಿಲ್ಲ, ರೈತರ ಬಗ್ಗೆ ಎಲ್ಲರಿಗೂ ಕಳಕಳಿ ಇದೆ, ರೈತರ ಬಗ್ಗೆ ಎಲ್ಲರಿಗೂ ಅಭಿಮಾನ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ವಾಟಾಳ್ ನಾಗರಾಜರು ಮತ್ತು ಇತರೆ ಸದಸ್ಯರು ಹೇಳಿರುವುದು ಸರಿಯಾಗಿದೆ. ಜನತಾ ದಳದವರಿಗೆ, ಮಂಡ್ಯಾದಲ್ಲಿ ಯಡಿಯೂರಪ್ಪನವರ ಸಾರ್ವಜನಿಕ ಸಭೆ ಇದೆಯೆಂದು ಗೊತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ವಾಟಾಳ್ ನಾಗರಾಜರ ಬಗ್ಗೆ ಗೌರವ ಇದೆ, ಸಿಂಧ್ಯರವರ ಬಗ್ಗೆ ಗೌರವ ಇದೆ, ದೇಶಪಾಂಡೆಯವರ ಬಗ್ಗೆ ಗೌರವ ಇದೆ, ಇವತ್ತು ಈ ಕಡೆ ಅಧಿಕೃತ ವಿರೋಧಪಕ್ಷದವರಾಗಿ ರೈತರಿಗೆ ನೆರವು ಕೊಡಿಸುವುದರಲ್ಲಿ ನಾವು ವಿಫಲರಾಗಿದ್ದೇವೆ. ಅತ್ಯಂತ ಬಹುಮತ ಇರುವಂಥ ಕಾಂಗ್ರೆಸ್ ಪಕ್ಷ ಜನರಿಗೆ ದ್ರೋಹ ಮಾಡುತ್ತಿದೆ, ಇದನ್ನು ತಿಳಿಸುವುದಕ್ಕೋಸ್ಕರ ಇವತ್ತಿನಿಂದ ರೈತರ ಜೊತೆ ಹಳ್ಳಿ ಹಳ್ಳಿಗೆ ಹೋಗುತ್ತಿದ್ದೇನೆ.

(ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:- ಬನ್ನಿಕೋಡ್‌ರವರೇ, ನೀವೇ ಅವರನ್ನು ಪುನಃ ವಾಪಸ್ ಕರೆದಿರಿ.

ಶ್ರೀ ವಾಟಾಳ್ ನಾಗರಾಜ್:- ಯಡಿಯೂರಪ್ಪನವರು ಹೊರಗಡೆ ಹೋಗುವುದು, ಇಲ್ಲಿ ಈಶ್ವರಪ್ಪನವರು ಕುಳಿತುಕೊಳ್ಳುವುದು, ಇದೇನೋ ನನಗೆ ಅರ್ಥವಾಗುವುದಿಲ್ಲ. ಇದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜರು ಎತ್ತಿರತಕ್ಕ ಆಕ್ಷೇಪಣೆಗೆ ನನ್ನ ಸಹಮತ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ವಾಟಾಳ್ ನಾಗರಾಜರ ಪರಿಸ್ಥಿತಿ ನೋಡಿ ನನಗೆ ಅಯ್ಯೋ ಎನಿಸುತ್ತಿದೆ. ನಿನ್ನೆ ಅವರ ಜೊತೆಯಲ್ಲಿ ಕುಳಿತುಕೊಂಡಿದ್ದರು. ಇವತ್ತು, ಇವರನ್ನು ಕೈಬಿಟ್ಟು, ಅವರು ಹೊರಗೆ ಹೋಗಿದ್ದಾರೆ. ವಾಟಾಳರನ್ನು ಕರೆದುಕೊಂಡು ಹೋಗಬೇಕಾಗಿತ್ತು.

ಶ್ರೀ ವಾಟಾಳ್ ನಾಗರಾಜ್:- ನನ್ನ ಬಗ್ಗೆ ಯಾರಿಗೂ ಅನುಕಂಪ ಬೇಡ. ಯಾರೂ ನನ್ನನ್ನು ಕೈಬಿಡುವುದು ಬೇಡ. ನನಗೆ ಆ ಶಕ್ತಿ ಇದೆ. ನಾನು ಅವರ ಜೊತೆ ಹೋಗಬೇಕೆಂದಿಲ್ಲ, ನನ್ನದೇ ಆದಂಥ ನಿರ್ಧಾರಗಳು ಇವೆ, ನೀತಿಗಳು ಇವೆ. ನಾನು ಅವರಿಗೋಸ್ಕರ ಧರಣಿ ಮಾಡಿದ್ದಲ್ಲ, ನನ್ನಿಂದ ಬೇರೆಯವರು ಧರಣಿ ಮಾಡುವುದನ್ನು ಕಲಿತಿದ್ದಾರೆ.

ಅಧ್ಯಕ್ಷರು:- ನಿಮ್ಮಿಂದ ಬಹಳ ಜನ, ಬಹಳ ಕಲಿತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಒಂದನ್ನು ತಾವು ಒಪ್ಪಿಕೊಳ್ಳುತ್ತೀರಿ. ನಾನು ಮಾಡತಕ್ಕಂಥ ಒಳ್ಳೆಯ ಕೆಲಸಗಳನ್ನು ತಾವು ಒಪ್ಪಿದ್ದೀರಿ. ನನ್ನ ಬಗ್ಗೆ ಪ್ರಶಂಸೆ ಮಾಡಿದ್ದೀರಿ, ನನ್ನ ಹೋರಾಟದ ಬಗ್ಗೆ, ನನ್ನ ಕಳಕಳಿ ಬಗ್ಗೆ ತಾವು ಒಪ್ಪುತ್ತೀರಿ ಎಂದು ಅಂದುಕೊಂಡಿದ್ದೇನೆ. ಏಕೋ ತಾವು ಈ ವಿಚಾರದಲ್ಲಿ ಮಾತೇ ಆಡುತ್ತಿಲ್ಲ...

ಅಧ್ಯಕ್ಷರು:- ಮೌನಂ ಸಮ್ಮತಿ ಲಕ್ಷಣಂ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಯಡಿಯೂರಪ್ಪನವರು, ದೇಶಪಾಂಡೆಯವರು ಹೇಳಿದ್ದಾರೆಂದು ಹೇಳಿದರು. ಅವರು ಹೊರಗೆ ಹೋಗುವಾಗ, ತಾನೇ ರೈತರ ಬಗ್ಗೆ ಈ ರಾಜ್ಯದಲ್ಲಿ ಮನಾಪಲಿ ತೆಗೆದುಕೊಂಡಿದ್ದೇನೆ, ಗುತ್ತಿಗೆ ತೆಗೆದುಕೊಂಡಿದ್ದೇನೆ ಎಂಬ ಮಾತನ್ನು ಹೇಳಿದ್ದಾರೆ. ಅದು ಸಾಧ್ಯವಿಲ್ಲ. ಇವತ್ತಿನವರೆಗೆ, ನೀವು ವ್ಯಾಪಾರಸ್ತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೀರಿ. ಯಡಿಯೂರಪ್ಪನವರು ಕಳೆದ ಮೂರು ದಿವಸದಿಂದ ಸಭೆ ಹಾಕಿದರು, ಇವತ್ತು ಮಂಡ್ಯದಲ್ಲಿ ಸಭೆ ಇದೆ ಹೊರಟಿದ್ದಾರೆ, ಬಿ.ಜೆ.ಪಿ.ಯ ಇತರೇ ಸದಸ್ಯರು ಇಲ್ಲಿಯೇ ಕುಳಿತಿದ್ದಾರೆ. ಅವರದು ಯಾವ ನೀತಿ ಎಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ಮತ್ತೊಂದು, ಇಡೀ ಕರ್ನಾಟಕ ರಾಜ್ಯದಲ್ಲಿ ಇಂತಹ ನೆರೆಹಾವಳಿ ಯಾವಾಗಲೂ ಆಗಿಲ್ಲ. ಇದನ್ನು ಎಲ್ಲರೂ ಒಪ್ಪುತ್ತಾರೆ. ಇಂತಹ ಸಂದರ್ಭದಲ್ಲಿ, ವಿರೋಧಪಕ್ಷದವರಾದ ನಾವು, ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆ, ಧಾರವಾಡ, ಚಿಕ್ಕಮಗಳೂರು, ಸೌತ್ ಕೆನರಾ, ನಾರ್ತ್ ಕೆನರಾ ಹೀಗೆ ಎಲ್ಲಾ ಕಡೆ ಪ್ರವಾಹ ಮಾಡಿ, ರೈತರ ಸಮಸ್ಯೆ, ರೈತರ ಕಷ್ಟದ ಬಗ್ಗೆ ನಾವು ಕೇಳಿಕೊಂಡು ಬಂದಿದ್ದೇವೆ. ಈ ಎಲ್ಲಾ ಸಮಸ್ಯೆಗಳನ್ನೂ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ನಾವು ಇದರಲ್ಲಿಯೂ ಸ್ವಲ್ಪ ವಿಫಲರಾಗಿದ್ದೇವೆ, ಆಗಿಲ್ಲವೆಂದು ಹೇಳುವುದಿಲ್ಲ. ಸರ್ಕಾರದ ಚಿಂತನೆ ಬಗ್ಗೆ, ನಾನು ಏನು ಮಾಡುವುದಕ್ಕೆ ಬರುತ್ತದೆ. ಚುನಾವಣೆ ಬಂದಾಗ ಅವರು ಇನ್ನೂ ಒಂದು ಹೇಳುತ್ತಾರೆ. ಹಾಗಾಗಿ, ನೆರೆಹಾವಳಿ ಪರಿಹಾರ ನಿಧಿಗೆ ಜನತಾ ದಳದ ಸದಸ್ಯರು ಒಂದು ತಿಂಗಳ ಸಂಬಳ ಕೊಟ್ಟಿದ್ದೇವೆ, ಇದಕ್ಕಿಂತ ಮಹತ್ವದ್ದು ಇಡೀ ರಾಜ್ಯದಲ್ಲಿ ಪ್ರವಾಸ ಮಾಡಿ, ರೈತರಿಗೆ ಏನು ಸಮಸ್ಯೆ ಇದೆ ಎನ್ನುವುದನ್ನು ತಿಳಿದುಕೊಂಡು ಬಂದಿದ್ದೇವೆ. ನೆರೆಹಾವಳಿ ಬಂದಾಗ ಇವರು, ಅಯೋಧ್ಯೆಗೆ ಕರಸೇವೆ ಮಾಡುವುದಕ್ಕೆ ಹೋದರು. ಇವರು ಯಾವ ಯಾವ ಜಿಲ್ಲೆಗೆ ಹೋಗಿದ್ದಾರೆ, ಒಂದು ಜಿಲ್ಲೆಗೂ ಹೋಗಿಲ್ಲ. ಪತ್ರಿಕೆಯಲ್ಲಿ ಏನು ಬಂದಿದೆ, ಅದರ ಆಧಾರದ ಮೇಲೆ ಶಾಸನ ಸಭೆಯಲ್ಲಿ ಮಾತನಾಡುತ್ತಿದ್ದಾರೆ. ಇವತ್ತು ನಾವು ರೈತರ ಪರವಾಗಿದ್ದೇವೆ, ರೈತರ ಪರವಾಗಿ ಹೋರಾಟ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹಾಗಾಗಿ, ಇದು ಅವರಿಗೆ ನಾಚಿಕೆ ಬರಬೇಕು. ಇದು ನಿಮ್ಮ

ಬೇಜವಾಬ್ದಾರಿ ಹೇಳಿಕೆ. ನೀವು, ನಿಮ್ಮ ಕರ್ತವ್ಯವನ್ನು ಮಾಡಿ, ಜನತಾ ದಳದ ಬಗ್ಗೆ ಹೇಳುವುದಕ್ಕೆ ನಿಮಗೆ ಅಧಿಕಾರ ಇಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ರಾಜ್ಯದಲ್ಲಿ ನಾವೂ ಕೂಡ ಎಲ್ಲಾ ಕಡೆ ಹೋಗಿ ನೋಡಿಕೊಂಡು ಬಂದಿದ್ದೇವೆ. ಇದು ಮಾನ್ಯ ದೇಶಪಾಂಡೆಯವರಿಗೆ ಗೊತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ನೀವು ಎಷ್ಟು ಮಾತನಾಡಬೇಕೋ ಅಷ್ಟು ಮಾತನಾಡಬೇಕೇ ವಿನಹ, ನಮ್ಮ ಮೇಲೆ ಅಪಾದನೆ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲ. ನಾನು ಇದನ್ನು ಬಹಳ ಕಟುವಾಗಿ ಖಂಡಿಸುತ್ತೇನೆ. ರೈತರ ಸಮಸ್ಯೆ ಬಂದಾಗ ಎಲ್ಲರೂ ಒಂದು ವಿಚಾರ ಮಾಡಬೇಕಾಗುತ್ತದೆ. ಪ್ರಾಮಾಣಿಕವಾಗಿ ಹೇಳಬೇಕಾದರೆ ರೈತರ ಬಗ್ಗೆ ಯಾರೂ ಚಿಂತನೆ ಮಾಡಲಿಕ್ಕೆ ತಯಾರಿಲ್ಲ. ದೊಡ್ಡ ದೊಡ್ಡ ಇಂಡಸ್ಟ್ರೀಗಳಿಗೆ ಬೇಕಾದರೆ ಬೇಕಾದಷ್ಟು ಸಹಾಯ ಮಾಡುತ್ತಾರೆ. ನಾವೂ ಹೇಳಿದ್ದೇವೆ ರೈತ ಬಹಳ ಕಷ್ಟದಲ್ಲಿ ಇದ್ದಾನೆ, ಬರಗಾಲ ಇತ್ತು, ಎಲ್ಲಾ ಬೆಳೆ ಹಾಳಾಗಿದೆ ಅಲ್ಪ ಸ್ವಲ್ಪ ಬೆಳೆ ಬಂತು ಅದಕ್ಕೂ ದರ ಇಲ್ಲ ಎಲ್ಲಾ ದರ ಕುಸಿದು ಬಿದ್ದಿದೆ. ಅದಲ್ಲದೆ ನೆರೆಹಾವಳಿ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಹೇಳಿದ್ದೇವೆ ಇದರ ಬಗ್ಗೆ ಚಿಂತನೆ, ವಿಚಾರ ಮಾಡಿ ರೈತನಿಗೆ ನೆರವಾಗಿರಿ ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. ಆದರೆ ಸರ್ಕಾರಕ್ಕೆ ಅದರ ಬಗ್ಗೆ ಚಿಂತನೆ ಇಲ್ಲ ಅದಕ್ಕೆ ನಾವೇನು ಮಾಡಲಿಕ್ಕೆ ಆಗುವುದಿಲ್ಲ. ಹಾಗಾಗಿ ಇವತ್ತು ಯಡಿಯೂರಪ್ಪನವರು ಏನು ಹೇಳಿದ್ದಾರೆ ಇದು ಒಂದು ಬೇಜವಾಬ್ದಾರಿ. ಒಬ್ಬ ಪಕ್ಷದ ಮುಖಂಡರಾಗಿ ಪ್ರಚಾರ ಪಡೆಯಲಿಕ್ಕೆ ಇದು ಉಪಯೋಗವಾಗುವುದಿಲ್ಲ. ಇದರಿಂದ ರೈತರಿಗೆ ಇವರು ಬೆಂಬಲ ಕೊಡಲಿಕ್ಕೆ ಸಾಧ್ಯವಿಲ್ಲ. ರೈತರನ್ನು ನಾವೂ ನೋಡಿದ್ದೇವೆ. ನಮ್ಮ ಸರ್ಕಾರ ಇದ್ದಾಗ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ ಹಲವಾರು ರಿಯಾಯಿತಿಗಳನ್ನು ಕೊಟ್ಟಿದ್ದೇವೆ. ರಾಜ್ಯದ ಇತಿಹಾಸದಲ್ಲಿ ಯಾವ ಸರ್ಕಾರ ಇಷ್ಟೊಂದು ರಿಯಾಯಿತಿ ರೈತರಿಗೆ ಕೊಟ್ಟಿಲ್ಲ. ಹಾಗಾಗಿ ಅವರು ಮಾಡಿ ತೋರಿಸಬೇಕು. ಕೇವಲ ಪೊಳ್ಳು ಘೋಷಣೆಯಿಂದ ಸಾಧನೆ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಬೈರೇಗೌಡ:– ಅವರು ಹೇಳಿರತಕ್ಕಂಥ ಕೆಲವು ಮಾತುಗಳಿಂದ ಏನಾಗಿದೆ. ಎಂದರೆ.....

ಅಧ್ಯಕ್ಷರು:– ಅವರು ಮುಂದಿನ 12ನೇ ತಾರೀಖು ಬರುತ್ತಾರಂತೆ, ಆಗ ಪುನಃ ರೈಸ್ ಮಾಡಿ ಅದನ್ನು.

ಶ್ರೀ ಸಿ. ಬೈರೇಗೌಡ:– ಯಾವ ರೀತಿ ನಡೆದುಕೊಂಡಿದ್ದಾರೆ ಎನ್ನತಕ್ಕದ್ದನ್ನು ಬಹುಶಃ ಈ ಸಭೆಯ ಮೂಲಕ ಜನತೆಯ ಗಮನಕ್ಕೆ ತರಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು:– ಅವಶ್ಯಕತೆ ಇಲ್ಲಾ ಎಂದು ನನ್ನ ಭಾವನೆ. ಸಾಕಾದಷ್ಟು ಈ ವಿಚಾರದಲ್ಲಿ ನಾವು ಸದನದ ಕಾಲವನ್ನು ಕಳೆದಿದ್ದೇವೆ. ಈ ರೈತರ ಸಮಸ್ಯೆ ಬಗ್ಗೆ ಬಹಳ ತೀವ್ರ ಸ್ವರೂಪದ ಚರ್ಚೆ ಕೂಡ ಆಗಿದೆ. ಸರ್ಕಾರದವರು ಅವರು ತಾವು ಮಾಡಿರತಕ್ಕಂಥ ಕೆಲಸ ಕಾರ್ಯಗಳನ್ನು ಹೇಳಿದ್ದಾರೆ. ಕೆಲವರಿಗೆ ಸಮಾಧಾನ ಆಗದೇ ಇರಬಹುದು. ಕೆಲವರಿಗೆ ಸಮಾಧಾನ ಆಗಿರಬಹುದು. ಆಗಬೇಕಾಗಿರತಕ್ಕಂಥದ್ದು ಬಹಳಷ್ಟು ಇದೆ ಎನ್ನತಕ್ಕಂಥದ್ದನ್ನು ಸರ್ಕಾರದವರು ಒಪ್ಪಿದ್ದಾರೆ. ಮಾನ್ಯ ಸಂಸದೀಯ ಸಚಿವರು ಹೇಳಿದ ಪ್ರಕಾರ ಮಾನ್ಯ ಮಂತ್ರಿಯವರು ಬಹುಶಃ ಈ ಒಂದು ಸಮಸ್ಯೆಯ ತೀವ್ರತೆಯನ್ನು ಅರ್ಥ ಮಾಡಿಕೊಂಡು ಅವರು ಚರ್ಚೆ ಮಾಡುತ್ತಾರೆಂದು ನಾನು ಕೂಡ ಭಾವನೆ ಮಾಡುತ್ತೇನೆ. ಈ ಒಂದು ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟು, ಇದಕ್ಕೆ ವಿದಾಯ ಹೇಳೋಣ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯು ನಮ್ಮ ರಾಜ್ಯದಲ್ಲಿ ಬಹಳ ಇಂಪಾರ್ಟೆಂಟ್ ಬಿಸಿನೆಸ್ ಸೆಂಟರ್. ಅಲ್ಲಿ ಸಾಧಾರಣ 11 ಅಸೋಸಿಯೇಷನ್ಸ್ ಇವೆ. ನನಗೂ ಒಂದು ಮನವಿ ಕಳುಹಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಕೊಟ್ಟಿದ್ದಾರೆ. ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ನಡೆಯುವ ಅತ್ಯಾಚಾರದ ಬಗ್ಗೆ, ಹೆರಾಸ್ಮೆಂಟ್ ಬಗ್ಗೆ ಅಲ್ಲಿರುವ ನಂಜನಗೌಡ ಎಂಬ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ. ಈ ಅಧಿಕಾರಿಯ ಸಮಸ್ಯೆ ಇಂಡಿವಿಜಿಯಲ್ ಆಗಿದ್ದರೆ ನಾನು ಇದಕ್ಕೆ ಹೆಚ್ಚು ಒತ್ತು ಕೊಡುತ್ತಿರಲಿಲ್ಲ. ಆದರೆ ಈ ಅಧಿಕಾರಿ, ಕ್ಯಾಷ್ ರೆವಿನ್ಯೂ ಕಲೆಕ್ಷನ್‌ನಲ್ಲಿ ಕಾಯಿದೆ ಬದ್ಧವಾಗಿ ಬೇಕಾದ್ದು ಕೆಲಸ ಮಾಡಲಿ. ಆದರೆ ಮನೆಗೆ ಹೋಗುವುದು, ಜನರಿಗೆ ಬೈಯುವುದು ಇದೆ. ಈತನ ಮೇಲೆ ಪೋಲೀಸ್ ಕಂಪ್ಲೇಂಟ್ ಸೂಡ ಆಗಿದೆ. ಇದು ಮುಖ್ಯಮಂತ್ರಿಗಳ ಗಮನಕ್ಕೂ ಬಂದಿದೆ. ನಿನ್ನೆ ಎಂಟೈರ್ ಹುಬ್ಬಳ್ಳಿ ಷಟರ್ ಡೌನ್ ಆಗಿತ್ತು. ಹುಬ್ಬಳ್ಳಿಯಲ್ಲಿ ಮಾರ್ಕೆಟ್ ನಡೆಯುತ್ತಿಲ್ಲ ಇಂತಹ ಪರಿಸ್ಥಿತಿಯಲ್ಲಿ ಒಳ್ಳೆಯ ಅಧಿಕಾರಿ ಇದ್ದರೆ ಅವರಿಗೆ ಸರ್ಟಿಫಿಕೇಟ್ ಕೊಡಿರಿ ಅವರಿಗೆ ಪ್ರಶಂಸೆ ಮಾಡಿ ಆದರೆ ಇಂತಹ ಬೇಜವಾಬ್ದಾರಿ ಅಧಿಕಾರಿಯಿಂದ ಹುಬ್ಬಳ್ಳಿಯಲ್ಲಿ ಏನು ಟ್ರೇಡ್ ಬಂದ್ ಆಗಿದೆ ಅದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತೇನೆ. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೆ. ಆದರೆ ಅದರ ಬಗ್ಗೆ ಯಾವ ಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಸರ್ಕಾರ, ನಾವು ಒಳ್ಳೆಯ ಆಡಳಿತ ಕೊಡುತ್ತೇವೆ ಮತ್ತು ಕ್ಲೀನ್ ಗೌರ್ನಮೆಂಟ್ ಕೊಡುತ್ತೇವೆ ಎಂದು ಹೇಳುವವರು ಮನೆ ಹೊಕ್ಕಿ ಏನು ಸಾಮಾನ್ಯ ಜನರ ಹೆರಾಸ್ಮೆಂಟ್ ಈ ಅಧಿಕಾರಿಯಿಂದ ನಡೆದಿದೆ, ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಅದರ ಬಗ್ಗೆ ವಿವರಗಳನ್ನು ತರಿಸಿ ಈ ದಿವಸವೇ ಹೇಳಿಕೆಗಳನ್ನು ಕೊಡಿಸುತ್ತೇನೆ.

(2) ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಬಗ್ಗೆ

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ತಮ್ಮ ಅನುಮತಿಯನ್ನು ಕೋರಿ ನಾನು ಒಂದು ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುತ್ತಾರೆಂದು ನಾನು ಅಂದುಕೊಂಡಿದ್ದೆ. ನಾನು ಇರುತ್ತೇನೆ ಎನ್ನತಕ್ಕಂಥ ಆಶ್ವಾಸನೆಯನ್ನು ಅವರು ಕೊಟ್ಟಿದ್ದರು. ಇವತ್ತೆ ಸದನದ ಕೊನೆಯ ದಿನ, ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುವಂಥಾದ್ದು ಇರುತ್ತದೆ. ನಾಳೆಯಿಂದ ಫೆಬ್ರವರಿ 12ನೇ ತಾರೀಖಿನವರೆಗೂ ಇಲ್ಲಿ ಸೇರುವುದಿಲ್ಲ. ವಿಶೇಷವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಈ ಸರ್ಕಾರ ದಿವಾಳಿ ಆಗಿದೆ ಎನ್ನತಕ್ಕ ಮಾತನ್ನು ನಾನು ಹೇಳಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಇಲ್ಲ ಇಲ್ಲ ನಮ್ಮ ಸರ್ಕಾರ ಬಹಳ ಭದ್ರವಾಗಿದೆ ಕಲೆಕ್ಷನ್ಸ್‌ನ್ನು ನಾವು ಇಂಪ್ರೂವ್ ಮಾಡಿಕೊಂಡಿದ್ದೇವೆ, ಈಗ ಯಾವುದೇ ಬಿಲ್ಸ್ ಪೇಮೆಂಟ್ ಕೂಡ ಸಹಿತ ಬಾಕಿ ಇಲ್ಲ ಎಲ್ಲಾ ಸರಿ ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಮೊನ್ನೆ ದಿವಸ ಸಾಯಂಕಾಲ ನನ್ನ ಕ್ಷೇತ್ರವಾಗಿರತಕ್ಕಂಥ ಕನಕಪುರದಲ್ಲಿ ಒಂದು ಸ್ಪೆಷಲ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಎಂ.ಐ.ಡಿವಿಷನ್ ಆಫೀಸ್ ಇದೆ. ಆ ಆಫೀಸ್‌ನಲ್ಲಿ ಕೋರ್ಟಿನಿಂದ ಅಟ್ಯಾಚ್‌ಮೆಂಟ್ ಬಂದು ಕಂಟ್ರಾಕ್ಟುದಾರರಿಗೆ ಇವರು ದುಡ್ಡನ್ನು ಪಾವತಿ ಮಾಡಿಲ್ಲ. ಅವರು ಲಕ್ಷಾಂತರ ರೂಪಾಯಿ ಕೆಲಸಗಳನ್ನು ಮಾಡಿದ್ದಾರೆ. ರೂ. 1,00,000 ಮತ್ತು 2,50,000 ರೂಪಾಯಿಗಳ ಬಿಲ್‌ಗಳನ್ನು ಪೇಮೆಂಟ್ಸ್ ಮಾಡುವುದಕ್ಕೂ ಸಹ ಸರ್ಕಾರದಲ್ಲಿ ದುಡ್ಡು ಇಲ್ಲ ಎಂದು ಕೋರ್ಟಿನಿಂದ ಅಟ್ಯಾಚ್‌ಮೆಂಟ್ ಮಾಡಿದ್ದಾರೆ. ಅವರು ಬಂದು ಅಲ್ಲಿರತಕ್ಕಂಥ ಟೈಪರೈಟರ್, ಅಲ್ಲಿರತಕ್ಕಂತಹ ಕುರ್ಚಿ, ಬೆಂಚು ಮೇಜು ಎಲ್ಲವನ್ನು ಸಹಿತ ಬೀದಿಗೆ ಎಸೆದಿದ್ದಾರೆ. ಮೊನ್ನೆ ದಿವಸದಿಂದ